## ಮಹಿಳೆಯರು ಒಂದಾಗದಿದ್ದರೆ

# ಲಿಂಗ ಸಮಾನತೆ ತರಲು ಸಾಧ್ಯವಿಲ್ಲ

**ಬೆಂಗಳೂರು, ಸೆ. 8 –** ವಿಶ್ವಾದ್ಯಂತ ಮಹಿಳೆಯರು ಒಂದಾಗಬೇಕಿದೆ. ಇಲ್ಲವಾದಲ್ಲಿ ಲಿಂಗ ಸಮಾನತೆ ತರಲು ಆಗುವುದಿಲ್ಲ. ಈ ಕಾರಣಕ್ಕಾಗಿ ಮಕ್ಕಳಿಗೆ ಲಿಂಗ ಸಮಾನತೆ ಬಗ್ಗೆ ತಿಳುವಳಿಕೆ ನೀಡುವ ಅಗತ್ಯವಿದೆ, ವಿಶ್ವಾದ್ಯಂತ ಮಹಿಳೆಯರು ಒಂದಾಗಬೇಕು ಎಂದು ಮಹಿಳಾ ಪ್ರತಿನಿಧಿಗಳು ಕರೆ ನೀಡಿದರು.

ಬಯೋ ಜೆನೆಸಿಸ್ ಹೆಲ್ತ್ ಕ್ಲಸ್ಟರ್ ಆಶ್ರಯದಲ್ಲಿ ಇಂದು ನಗರದ ಇಂಡಿಯನ್ ಇನ್ಸ್ಟ್ಯೂಟ್ ಆಫ್ ಸೈನ್ಸ್ ನ ಜೆ.ಎನ್. ಟಾಟಾ ಆಡಿಟೋರಿಯಂನಲ್ಲಿ ವರ್ಲ್ಡ್‌ಕಾಂಗ್ರೆಸ್‌ಆನ್‌ವುಮೆನ್(ಡಬ್ಲ್ಯುಸಿಡಬ್ಲ್ಯು) ಆಯೋಜಿಸಿರುವ  ಐದನೇ ವಿಶ್ವ ಮಹಿಳಾ ಸಮಾವೇಶದಲ್ಲಿ ಅನೇಕ ಮಹಿಳಾ ನಾಯಕರು ಈ ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಪುದುಚೇರಿ ರಾಜ್ಯಪಾಲರಾದ ಲೆ. ಕಿರಣ್‌ಬೇಡಿ  ಉದ್ಘಾಟಿಸಿದರು.

ಜೊತೆಗೆ ಮಹಿಳೆಯರ ಹಕ್ಕುಗಳಿಗಾಗಿ ಭವಿಷ್ಯದಲ್ಲಿ ಯಾವ ರೀತಿ ಕೆಲಸ ಮಾಡಬೇಕೆಂದು ಚಿಂತನ ಮಂಥನವನ್ನುನಡೆಸಲಾಯಿತು.ಆರೋಗ್ಯ,ವೈಯಕ್ತಿಕ ಹಣಕಾಸು, ಕಾರ್ಯನಿರ್ವಾಹಕ ನಾಯಕತ್ವ, ಸಣ್ಣ ವ್ಯಾಪಾರ ಮತ್ತು ಉದ್ಯಮಶೀಲತೆ, ಕೆಲಸ, ಜೀವನ ಸಮತೋಲನ, ಬ್ರ್ಯಾಂಡಿಂಗ್, ಸಾಮಾಜಿಕ ಮಾಧ್ಯಮ, ವ್ಯಾಪಾರ, ವೃತ್ತಿಪರ ಅಭಿವೃದ್ಧಿ ಮತ್ತು ವೈಯಕ್ತಿಕ ಬೆಳವಣಿಗೆ ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ಈ ಸಮ್ಮೇಳನದಲ್ಲಿ ಪ್ರಸ್ತಾಪವಾಯಿತು.

ವ್ಯಾಪಾರ, ಉದ್ಯಮಶೀಲತೆ, ಹಣಕಾಸು, ವಿಜ್ಞಾನ, ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ಸಂಶೋಧನೆ, ಆರೋಗ್ಯ ರಕ್ಷಣೆ, ಸಲಹಾ, ವಕಾಲತ್ತು ಮತ್ತು ಮನರಂಜನೆ ಸೇರಿದಂತೆ ಅನೇಕ ಕ್ಷೇತ್ರಗಳ ಬಗ್ಗೆ ಈ ಸಮ್ಮೇಳನದಲ್ಲಿ ಗೋಷ್ಠಿಗಳನ್ನ ನಡೆಸಲಾಯಿತು.

ಸಮ್ಮೇಳನದ ಸಂಚಾಲಕ ಡಾ. ವಿ.ಪಿ. ರಾವ್ ಮಾತನಾಡಿ, ನನ್ನ 25 ವರ್ಷದ ಅನುಭವದಲ್ಲಿ ಅನೇಕ ಸ್ಫೂರ್ತಿದಾಯಕ ಮಹಿಳಾ ನಾಯಕರನ್ನು ಭೇಟಿಯಾಗಿದ್ದೇನೆ. ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಕಂಡವರು ಇದ್ದಾರೆ. ಈ ಮಹಿಳೆಯರು ಬಲವಾದ ಆತ್ಮವಿಶ್ವಾಸ, ಉತ್ಸಾಹ ಹೊಂದಿದ್ದಾರೆ ಎಂದು ಹೇಳಿದರು.

ಸಮ್ಮೇಳನದಲ್ಲಿಮಹಿಳೆಯರುಪ್ರಸ್ತಾಪಿಸುವಹಾಗೂ ಚರ್ಚಿಸುವ ವಿಚಾರಗಳು ವಿಶ್ವ ಆರ್ಥಿಕತೆಗೆ ಕೊಡುಗೆ ನೀಡಲು ಸಹಾಯ ಮಾಡುತ್ತದೆ. ಆ ಮೂಲಕ ಲಿಂಗ ಸಮಾನತೆಯು ಮತ್ತು ಮಹಿಳಾ ಸಬಲೀಕರಣಕ್ಕೆ ಇಲ್ಲಿ ನಾಂದಿ ಹಾಡಲಾಗುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮೈಸೂರು ರಾಜಮಾತೆ ಪ್ರಮೋದ ದೇವಿ ಒಡೆಯರ್, ಐಪಿಎಸ್ ಅಧಿಕಾರಿ ಡಾ. ರಶ್ಮಿ ಕೃಷ್ಣನ್, ಡಾ. ಕಲ್ಪನಾ ಗೋಪಾಲನ್, ಡಾ ಸೌಮ್ಯ ಮಿಶ್ರಾ, ವಿಶ್ವ ಮಹಿಳಾ ಸಮಾವೇಶ ಅಧ್ಯಕ್ಷೆ ಡಾ. ಕಾಮಿನಿ ಎ. ರಾವ್, (ಡಬ್ಲ್ಯುಸಿಡಬ್ಲ್ಯು) ಕಾರ್ಯದರ್ಶಿ ಡಾ. ಪದ್ಮಿನಿ ಪ್ರಸಾದ್ ಭಾಗವಹಿಸಿದ್ದರು.